SEVA BHARATHI
सेवा ही परमो धर्मः

ಏಪ್ರಿಲ್ - 2026
ಸಂಚಿಕೆ - 04
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216



## ನೆರಿಯದಲ್ಲಿ ಸಂಪನ್ನಗೊಂಡ 36 ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ

## ಕನ್ಯಾಡಿ ಸೇವಾಭಾರತಿಯಿಂದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಭೇಟಿ

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ

## ಅಸಂಘಟಿತ ಕಾರ್ಮಿಕರ ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದವರ ಕಲ್ಯಾಣಕ್ಕಾಗಿ ಕನ್ಯಾಡಿ ಸೇವಾಭಾರತಿ ಮನವಿ

## ಅಸಾಧ್ಯವನ್ನು ಸಾಧ್ಯವಾಗಿಸಿದ ಪುತ್ತೂರಿನ ಪ್ರದೀಪ್ ಅವರ ಯಶೋಗಾಥೆ

ಯಶೋಗಾಥೆ

Mob,9945491241 I E-mail : sevabharathikanyady@gmail.com I Website : www.sevabharathi.org

## ನಮ್ಮೊಂದಿಷ್ಟು

**ಆತ್ಮೀಯರಿಗೆಲ್ಲ ನಮಸ್ಕಾರಗಳು,**

ಅದೆಷ್ಟು ಮನಸ್ಸಿಗೆ ಸಂತೋಷವಾಗುತ್ತಿದೆ ಎಂದರೆ ಹೇಳಲಾರದಷ್ಟು. ಬೈಂದೂರು ಸೇವಾಧಾಮ ಪುನಶ್ಚೇತನ ಕೇಂದ್ರವು ಪ್ರತ್ಯೇಕವಾಗಿ ಬೆನ್ನುಹುರಿ ಅಪಘಾತಗೊಂಡ ದಿವ್ಯಾಂಗರ ಒತ್ತಡ ಗಾಯ ನಿರ್ವಹಣೆಗಾಗಿಯೇ ಪ್ರಾರಂಭಗೊಂಡು ಮೂರು ತಿಂಗಳಾದವು. ಅಲ್ಲಿ ಲೇಸರ್ ಚಿಕಿತ್ಸೆ ಪಡೆಯುತ್ತಿರುವವರನ್ನು ಭೇಟಿಯಾದಾಗ ಮತ್ತು ಚಿಕಿತ್ಸೆ ನೀಡುವ ರೀತಿಯನ್ನು ಕಂಡಾಗ ಅದೆಷ್ಟೋ ವರ್ಷಗಳ ಕನಸ್ಸು ಸಾಕಾರಗೊಂಡಿದ್ದು ಸಂತೋಷಕ್ಕೆ ಕಾರಣವಾಯಿತು. ಈಗಾಗಲೇ ಇಲ್ಲಿಂದ ಇಬ್ಬರು ಗುಣಮುಖವಾಗಿ ತೆರಳಿದ್ದು ಸೇರಿ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ಇದಕ್ಕೆ ಕಾರಣೀಭೂತರಾಗಿರುವ ಶಾಸಕ ಮಿತ್ರರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ, ಅಜೀಮ್ ಪ್ರೇಮ್ ಜಿ ಫೌಂಡೇಶನ್ ಮತ್ತು ನಮ್ಮ ಸಿಬ್ಬಂದಿಗಳು ಸ್ಮರಣೀಯರು ಹಾಗೂ ಸತ್ಕರ್ಹರು.

ಕರ್ನಾಟಕ ಸರಕಾರದ ಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಮಿಕ ಆಯುಕ್ತರನ್ನು ನಮ್ಮ ಸಂಸ್ಥೆಯ ಖಜಾಂಜಿ ಜಯರಾಜ್ ರವರು ಕಾರ್ಮಿಕರ ಸಮಸ್ಯೆಗಳ ಕುರಿತು ಭೇಟಿ ಮಾಡಿ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಬದುಕಿಗೆ ಕಾಯಕಲ್ಪ ಕಲ್ಪಿಸಿಕೊಡುವಂತೆ ವರದಿಯನ್ನು ನೀಡಿ ಆಗ್ರಹಿಸಿರುವುದು ದಿವ್ಯಾಂಗರ ಬದುಕಲ್ಲಿ ಒಂದು ಹೆಜ್ಜೆ ಮುಂದಡಿ ಇಟ್ಟಂತಾಗಿದೆ. ಈ ಮೊದಲು ಹಲವಾರು ನಮ್ಮಂತ ದಿವ್ಯಾಂಗರಿಗೆ ಸಿಗಬೇಕಿದ್ದ ಪರಿಹಾರವನ್ನು ತೆಗೆಸಿಕೊಡುವಲ್ಲಿ ಅವರ ಪ್ರಯತ್ನ ಶ್ಲಾಘನೀಯ ಮತ್ತು ಉಲ್ಲೇಖನೀಯ.

36ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರವು ನೆರಿಯದಲ್ಲಿ ಸಂಪನ್ನಗೊಂಡಿತು. ಮುಂಡಾಜೆ ಕೃಷಿ ಪತ್ತಿನ ಸಹಕಾರಿ ಸಂಘದ ಸಹಕಾರದಲ್ಲಿ, ಶ್ರೀ ದುರ್ಗಾಮಾತೃ ಮಂಡಳಿ ಆಯೋಜನೆಗೊಳಿಸಿದ್ದು ಶಿಬಿರದ ಯಶಸ್ವಿಗೆ ಕಾರಣವಾಯಿತು.

ಇನ್ನು ಕನ್ಯಾಡಿಯ ಸೇವಾಧಾಮದ ಕಟ್ಟಡ ನಿರ್ಮಾಣ ಕಾರ್ಯ ಭರದಿಂದ ನಡೆಯುತ್ತಿದೆ. ಎರಡನೇ ಮಹಡಿಯ ಟೆರೇಸ್ ಕಾಂಕ್ರೀಟ್ ಕೆಲಸ ಶೀಘ್ರದಲ್ಲಿ ಮುಗಿಯಲಿದೆ. ಒಟ್ಟು ಒಂದನೇ ಮತ್ತು ಎರಡನೇ ಮಹಡಿ 4 ತಿಂಗಳಲ್ಲಿ ಪೂರ್ಣಗೊಂಡು ಲೋಕಾರ್ಪಣೆಗೊಳ್ಳಲಿದೆ ಉಳಿದ ಎರಡು ಮಹಡಿಗೆ ಧನ ಕ್ರೋಢಿಕರಣಕ್ಕಾಗಿ ಪ್ರಯತ್ನಗಳು ನಡೆಯುತ್ತಲೇ ಇದೆ

**ಒಟ್ಟಿನಲ್ಲಿ ಸೇವಾ ಕಾರ್ಯ ಅನವರತ**



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**
**ಕೆ. ವಿನಾಯಕ ರಾವ್**

## ಮಾರ್ಚ್ ತಿಂಗಳ ಸೇವಾಪಥ ಬಿಡುಗಡೆ



**ಮಾರ್ಚ್ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ ಸೇವಾಪಥವನ್ನು ಸಂಸ್ಥೆಯ ಹಿತೈಷಿ ಹಾಗೂ ಉಜಿರೆಯ MG ಟ್ರೇಡರ್ಸ್ ನ ಮಾಲಕರಾದ ಶ್ರೀ ಮಧುಸೂಧನ್ ರವರು ಬಿಡುಗಡೆಗೊಳಿಸಿರುತ್ತಾರೆ.**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 : 94482 54888**

**ಸೇವಾಧಾಮ ಬೈಂದೂರು**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಪೋಸ್ಟ್, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214**


### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀ ಸುಮಂತ್ ಕುಮಾರ್ ಜೈನ್
ಶ್ರೀ ಮಂಜುನಾಥ್ ಕನ್ಯಾಡಿ

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರಾವ್ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಲ್ಮ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

# ನೆರಿಯದಲ್ಲಿ ಸಂಪನ್ನಗೊಂಡ 36 ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ




**ನೆರಿಯ (ಏ. 16):** ಸೇವಾಭಾರತಿ (ರಿ.), ಕನ್ಯಾಡಿ ಇದರ ಆಶ್ರಯದಲ್ಲಿ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ಶ್ರೀ ದುರ್ಗಾ ಮಾತೃ ಮಂಡಳಿ, ಕನ್ಯಾಡಿ ಇದರ ಸಹಕಾರದಲ್ಲಿ ಸಬಲಿನಿ ಯೋಜನೆಯಡಿ ಮಹಿಳೆಯರಿಗಾಗಿ 36ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಏಪ್ರಿಲ್ 16 ರಂದು ನೆರಿಯದ ಬಯಲು ಬಸದಿಯ ಹತ್ತಿರ ಶ್ರೀಮತಿ ಶಿಲ್ಪಿಯವರ ಕಾಂಪ್ಲೆಕ್ಸ್ ನಲ್ಲಿ ನಡೆಯಿತು.

ಮುಂಡಾಜೆ ಪ್ರಾ.ಕೃ.ಪ.ಸ.ಸಂಘ(ನಿ.), ಅಧ್ಯಕ್ಷರಾದ ಶ್ರೀ ಪ್ರಕಾಶ್ ನಾರಾಯಣರವರು ಮಾತನಾಡಿ ಕಲಿತಂತ ವಿದ್ಯೆಯನ್ನು ಅರ್ಧಕ್ಕೆ ಕೈ ಬಿಡದೆ ಮುಂದುವರಿಸಿಕೊಂಡು ಹೋಗಿ ಎಂದು ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಕನ್ಯಾಡಿ ಸೇವಾಭಾರತಿಯ ಖಜಾಂಚಿ ಶ್ರೀ ಎ ಜೈರಾಜ್ ಸಾಲ್ಯಾನ್, ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ, ಕನ್ಯಾಡಿ ಶ್ರೀ ದುರ್ಗಾಮಾತೃ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಮಮತಾ ಬಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಒಟ್ಟು 23 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಸಜಿತಾ ಎಲ್ಲರಿಗೂ ಶುಭಹಾರೈಸಿ ಸಂತಸ ವ್ಯಕ್ತಪಡಿಸಿದರು. ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದವರು ಶ್ರೀಮತಿ ಸಜಿತಾ ರವರಿಗೆ ಗೌರವಧನವನ್ನು ನೀಡಿ ಸಹಕರಿಸಿದ್ದಾರೆ. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಶ್ರೀಮತಿ ಗಿರಿಜಾ ಸ್ವಾಗತಿಸಿ, ಸೇವಾಭಾರತಿ ಡಾಕ್ಯುಮೆಂಟೇಶನ್ ಮೋನಿಟರಿಂಗ್ ಮತ್ತು ಇವ್ಯಾಲ್ಯೂಯೇಷನ್ ಕೋಆರ್ಡಿನೇಟರ್ ಕು. ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ರಜನಿ ಧನ್ಯವಾದವಿತ್ತರು.

# ಬೆನ್ನುಹುರಿ ಅಪಘಾತಕ್ಕೊಳಗಾದ ಸಾಲು ಜೋಸೆಫ್ ರವರು ನೆರಿಯದ ಉಚಿತ ಟೈಲರಿಂಗ್ ಶಿಬಿರಕ್ಕೆ ಭೇಟಿ



**ನೆರಿಯ (ಏಪ್ರಿಲ್ 16):** ಬೆನ್ನುಹುರಿ ಅಪಘಾತಕ್ಕೊಳಗಾದ ಸೇವಾಧಾಮದ ಫಲಾನುಭವಿ ನೆರಿಯದ ಶ್ರೀ ಸಾಲು ಜೋಸೆಫ್ ರವರು 36ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರಕ್ಕೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಖಜಾಂಚಿ ಶ್ರೀ ಎ. ಜೈರಾಜ್ ಸಾಲ್ಯಾನ್, ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ ಹಾಗೂ ಸಬಲಿನಿ ಯೋಜನೆಯ ಸಂಚಾಲಕಿ ಶ್ರೀಮತಿ ಮಮತಾ ರವರು ಸಾಲು ಜೋಸೆಫ್ ಅವರ ಆರೋಗ್ಯವನ್ನು ವಿಚಾರಿಸಿ ಆತ್ಮೀಯವಾಗಿ ಮಾತುಕತೆ ನಡೆಸಿ ಧೈರ್ಯದಿಂದ ಜೀವನವನ್ನು ಎದುರಿಸುವಂತೆ ಪ್ರೇರಣೆ ನೀಡಿದರು.

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ದಿನದ ಊಟಕ್ಕಾಗಿ ದೇಣಿಗೆ:



**ಕನ್ಯಾಡಿ (ಏ.02):** ಉಜಿರೆಯ ಕು. ಅದಿತಿ ಶೆಟ್ಟಿ ಹಾಗೂ ಅವರ ಕುಟುಂಬಸ್ಥರು ಕನ್ಯಾಡಿ ಸೇವಾನಿಕೇತನಕ್ಕೆ ಏಪ್ರಿಲ್ 02 ರಂದು ಭೇಟಿ ನೀಡಿ ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಒಂದು ದಿನದ ಊಟಕ್ಕಾಗಿ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಸಿಬ್ಬಂದಿ ವರ್ಗದವರು ದೇಣಿಗೆಯನ್ನು ಸ್ವೀಕರಿಸಿ, ಸಂಸ್ಥೆಯ ಪರವಾಗಿ ಶುಭಹಾರೈಸಿ ಧನ್ಯವಾದವಿತ್ತರು.

## ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖರಿಂದ ಕನ್ಯಾಡಿ ಸೇವಾಭಾರತಿಗೆ ಭೇಟಿ



**ಕನ್ಯಾಡಿ (ಏ. 03)** ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸಹ ಸೇವಾ ಪ್ರಮುಖರಾದ ಶ್ರೀಯುತ ನಾ. ಸೀತಾರಾಮ ಹಾಗೂ ಮಂಗಳೂರು ವಿಭಾಗ ಸಹ ಸೇವಾ ಪ್ರಮುಖರಾದ ಡಾ. ಮನೋಜ್ , ಪುತ್ತೂರು ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಶ್ರೀಯುತ ಹೇಮಚಂದ್ರ, ಪುತ್ತೂರು ಜಿಲ್ಲಾ ಬೌದ್ಧಿಕ್ ಪ್ರಮುಖರಾದ ಶ್ರೀಯುತ ಸುಬ್ರಾಯ ಪುಣಚ ರವರು ಕನ್ಯಾಡಿ ಸೇವಾನಿಕೇತನಕ್ಕೆ ಏಪ್ರಿಲ್ 03 ರಂದು ಭೇಟಿ ನೀಡಿ ನೂತನ ಕಟ್ಟಡವನ್ನು ವೀಕ್ಷಿಸಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಶುಭಹಾರೈಸಿದರು.

## ಕನ್ಯಾಡಿ ಸೇವಾಭಾರತಿಯಿಂದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಭೇಟಿ



**ಮಂಗಳೂರು (ಏ. 01)** ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ(CEO) ಶ್ರೀ ವಿನಾಯಕ್ ನರ್ವಡೆ ರವರನ್ನು ಸೇವಾಭಾರತಿ ತಂಡ ಏಪ್ರಿಲ್ 01 ರಂದು ಭೇಟಿ ನೀಡಿ ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ, ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿಯ ಖಜಾಂಚಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.

## ಬೈಂದೂರು ಸೇವಾಧಾಮಕ್ಕೆ ಶಿರಸಿಯ ಶ್ರೀ ಕೃಷ್ಣ ಪೂಜಾರಿ ಭೇಟಿ:




**ಬೈಂದೂರು (ಏ. 01):** ಬೆನ್ನುಹುರಿ ಅಪಘಾತಕ್ಕೊಳಗಾದ ಶಿರಸಿಯ ಶ್ರೀ ಕೃಷ್ಣ ಪೂಜಾರಿ ಹಾಗೂ ಅವರ ಕುಟುಂಬಸ್ಥರು ಏಪ್ರಿಲ್ 01 ರಂದು ಬೈಂದೂರು ಒತ್ತಡಗಾಯ ನಿರ್ವಹಣಾ ಮತ್ತು ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಕೇಂದ್ರದ ಸನಿವಾಸಿಗಳ ಆರೋಗ್ಯವನ್ನು ವಿಚಾರಿಸಿ ಧೈರ್ಯ ತುಂಬಿದರು. . ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆ



**ಸೌತಡ್ಕ (ಏ.11) :** ಸೇವಾಧಾಮದ ಫಲಾನುಭವಿಗಳಾದ ನಾರಾವಿಯ ಶ್ರೀ ಕೆ. ಕೃಷ್ಣಪ್ಪ, ಅಜೆಕ್ಕಾರಿನ ಶ್ರೀ ಸಚಿನ್ ನಾಯ್ಕ್, ಮಾಳದ ಶ್ರೀ ಪ್ರಶಾಂತ್ ನಾಯ್ಕ್, ಕೌಡೂರಿನ ಶ್ರೀ ಸುರೇಶ್ ಆಚಾರ್ಯ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ ಏಪ್ರಿಲ್ 11 ರಂದು ಭೇಟಿ ನೀಡಿ, ಒಂದು ಹೊತ್ತಿನ ಊಟಕ್ಕಾಗಿ ರೂ. 3,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.
ಸೇವಾಭಾರತಿಯ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಟೈಲರಿಂಗ್ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಕಾರ್ಯಗಾರ



ಬೆಳ್ತಂಗಡಿ, ಸಿರಿ ಗ್ರಾಮೋದ್ಯೋಗ ಸಂಸ್ಥೆ ಮತ್ತು ಕನ್ಯಾಡಿ ಸೇವಾಭಾರತಿ (ರಿ.) ಇದರ ಸಹಯೋಗದೊಂದಿಗೆ ಕನ್ಯಾಡಿ ಶ್ರೀ ದುರ್ಗಾ ಮಾತೃ ಮಂಡಳಿ ವತಿಯಿಂದ ಏಪ್ರಿಲ್ 08 ರಂದು ಕನ್ಯಾಡಿಯ ಸೇವಾನಿಕೇತನದಲ್ಲಿ ಈ ಹಿಂದೆ ಟೈಲರಿಂಗ್ ತರಬೇತಿ ಪಡೆದವರಿಗಾಗಿ ಉದ್ಯೋಗಾವಕಾಶಗಳ ಕುರಿತು ಮಾಹಿತಿ ಕಾರ್ಯಗಾರವನ್ನು ಆಯೋಜಿಸಲಾಯಿತು.

ಈ ಕಾರ್ಯಗಾರದಲ್ಲಿ ಟೈಲರಿಂಗ್ ಕ್ಷೇತ್ರದಲ್ಲಿ ಲಭ್ಯವಿರುವ ಉದ್ಯೋಗಾವಕಾಶಗಳು, ಸ್ವಯಂ ಉದ್ಯೋಗ ಪ್ರಾರಂಭಿಸುವ ವಿಧಾನಗಳು, ಹಾಗೂ ಆರ್ಥಿಕ ಸ್ವಾವಲಂಬನೆ ಸಾಧಿಸಲು ಅಗತ್ಯವಾದ ಮಾರ್ಗದರ್ಶನ ನೀಡಲಾಯಿತು. ಕಾರ್ಯಕ್ರಮದಲ್ಲಿ ಪರಿಣಿತರು ಭಾಗವಹಿಸಿ ತರಬೇತಿಗೊಂಡ ಮಹಿಳೆಯರಿಗೆ ಪ್ರಾಯೋಗಿಕ ಸಲಹೆಗಳು ಮತ್ತು ಉಪಯುಕ್ತ ಮಾಹಿತಿಗಳನ್ನು ನೀಡಿ ಪ್ರೋತ್ಸಾಹ ನೀಡಿದರು.

## ಕನ್ಯಾಡಿ ಸೇವಾಭಾರತಿಗೆ ಬೆಂಗಳೂರು ಮಲ್ಟಿಫ್ಲೈ ಲೈಫ್ ಸ್ಟೈಲ್ ಪ್ರೈವೇಟ್ ಲಿಮಿಟೆಡ್ ನ ಸಂಸ್ಥಾಪಕರ ಭೇಟಿ.




**ಕನ್ಯಾಡಿ (ಏ. 05):** ಬೆಂಗಳೂರು ಮಲ್ಟಿಫ್ಲೈ ಲೈಫ್ ಸ್ಟೈಲ್ ಪ್ರೈವೇಟ್ ಲಿಮಿಟೆಡ್ ನ ಸಂಸ್ಥಾಪಕರಾದ ಶ್ರೀಮತಿ ವೃಂದಾ ಪಂಚೋಲಿ ಹಾಗೂ ಶ್ರೀ ಮೇಹುಲ್ ಕುಮಾರ್ ಪಂಚೋಲಿ ಯವರು ಕನ್ಯಾಡಿ ಸೇವಾನಿಕೇತನಕ್ಕೆ ಏಪ್ರಿಲ್ 05 ರಂದು ಭೇಟಿ ನೀಡಿ ನೂತನ ಕಟ್ಟಡವನ್ನು ವೀಕ್ಷಿಸಿ, ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಶುಭಹಾರೈಸಿದರು.

## ಬೈಂದೂರು ಸೇವಾಧಾಮಕ್ಕೆ ಬಾಡ ಗ್ರಾಮದ ಸರಕಾರಿ ಶಾಲೆಯ ಸಿಬ್ಬಂದಿ ವರ್ಗದವರ ಭೇಟಿ



**ಬೈಂದೂರು (ಏ.9) :** ತಾಲೂಕಿನ ಬಾಡ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿಗಳಾದ ಶ್ರೀ ರಾಘವೇಂದ್ರ ದೇವಾಡಿಗ, ಶ್ರೀಮತಿ ಜಯಲಕ್ಷ್ಮಿ, ಶ್ರೀಮತಿ ಗೀತಾ ದೇವಾಡಿಗ, ಶ್ರೀಮತಿ ನಾಗರತ್ನ, ಮತ್ತು ಶ್ರೀಮತಿ ವಿನೋದ ರವರು ಏಪ್ರಿಲ್ 09 ರಂದು ಬೈಂದೂರು ಒತ್ತಡಗಾಯ ನಿರ್ವಹಣಾ ಮತ್ತು ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ದಿವ್ಯಾಂಗರ ಆರೋಗ್ಯವನ್ನು ವಿಚಾರಿಸಿ ದೇಣಿಗೆಯಾಗಿ ಹಣ್ಣುಗಳನ್ನು ನೀಡಿರುತ್ತಾರೆ. ಬೈಂದೂರು ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ವಿರೂಪಾಕ್ಷಿಯವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು ಆಖ್ಯಾನ್ ಶೆಟ್ಟಿ ಉಡುಪಿಯವನು, ನಾನು ಇಲ್ಲಿ ಬಂದು ಮೂರು ತಿಂಗಳು ಆಯ್ತು ನನಗೆ ಸ್ಪೈನಲ್ ಟ್ಯೂಮರ್ ಆಗಿ ಮೂರು ವರ್ಷ ಮಗುವಾಗಿದ್ದಾಗ ನಿಮಾನ್ಸ್ ಹಾಸ್ಪಿಟಲ್ ಬೆಂಗಳೂರಿನಲ್ಲಿ ಸರ್ಜರಿ ಆಯ್ತು ಅದಕ್ಕೂ ಮೊದಲು ನಾನು ಚೆನ್ನಾಗಿ ಓಡಾಡಿಕೊಂಡು ಸೈಕಲ್ ಎಲ್ಲ ಓಡಿಸ್ತಾ ಇದ್ದೆ. ಎಡ ಗೈಯಲ್ಲಿ ಮೊದಲು ತೊಂದರೆ ಕಾಣಿಸಿಕೊಂಡಿತು. KMC ಮಣಿಪಾಲದಲ್ಲಿ MRI ಮಾಡಿದಾಗ ಮೊದಲು ಟ್ಯೂಮರ್ ಗೊತ್ತಾಗಿ ಸರ್ಜರಿ ಮಾಡಲು Nimans ಗೆ ಹೋದೆವು ಸರ್ಜರಿ ಮುಗಿದ ನಂತರ ಎರಡುವರೆ ವರ್ಷಗಳ ಕಾಲ Mazumdar shaw Cancer Hospital ಬೆಂಗಳೂರಿನಲ್ಲಿ ಟ್ರೀಟ್ಮೆಂಟ್ ಆಯ್ತು. ಪುನಃ ನಾರ್ಮಲ್ ಆಗಿ ನಡೆಯುತ್ತಾ ಇದ್ದೆ. ಒಂದನೇ ಕ್ಲಾಸ್ ಸ್ಕೂಲ್ಗೆ ಸಹ ಹೋದೆ. ಪುನಃ ನನ್ನ ಎಂಟನೇ ವಯಸ್ಸಿನಲ್ಲಿ ಟ್ಯೂಮರ್ ಗ್ರೋಥ್ ಆಗಿ ಸರ್ಜರಿ ಮಾಡಬೇಕಾಯಿತು. ಅದೇ ಎರಡು ತಿಂಗಳಿನಲ್ಲಿ ಹಿಪ್ ಡಿಸ್ಲೋಕೇಟ್ ಆಗಿ ಹಿಪ್ ಸರ್ಜರಿಯಾಯಿತು. 11ನೇ ವಯಸ್ಸಿನಲ್ಲಿ ಪುನಃ ಇನ್ನೊಂದು ಸಲ ಸ್ಪೈನ್ ಸರ್ಜರಿಯಾಯಿತು. ನಾನು ಒಮ್ಮೆ KMC ಆಸ್ಪತ್ರೆಯಲ್ಲಿ ನನಗೆ ಸರ್ವೋತ್ತಮ್ ಸರ್ ಅವರ ಭೇಟಿ ಮಾಡಿ ಸೇವಾಧಾಮದ ಬಗ್ಗೆ ತಿಳಿಸಿದರು. ಹಾಗೆ ಮನೋಜ್ ಶೆಟ್ಟಿ ಸರ್ ಮನೆಗೆ ಬಂದು ಸೇವಾಧಾಮದ ಬಗ್ಗೆ ತಿಳಿಸಿದರು ವಿಖ್ಯಾತಿ ಮೇಡಂ ಅವರನ್ನು ವಿಡಿಯೋ ಕಾಲ್ ಅಲ್ಲಿ ಕಾಂಟಾಕ್ಟ್ ಮಾಡಿ ನಾವು ಸೇವಾಧಾಮಕ್ಕೆ ಜನವರಿ 1ನೇ ತಾರೀಕಿನಂದು ಬಂದೆವು. ಇಲ್ಲಿ ಬರುವಾಗ ಟೈಟ್ನೆಸ್ ಇತ್ತು. ಊಟವನ್ನು ಸ್ಪೂನಲ್ಲಿ ಮಾಡ್ತಾ ಇದ್ದೆ ಸರಿಯಾಗಿ ನಿಲ್ಲಲು ಆಗ್ತಾ ಇರಲಿಲ್ಲ. ಈಗ ನನಗೆ Knee Braze ಮತ್ತು Afo ಹಾಕಿ ನಡೆಯಲು ಆಗ್ತಾ ಇದೆ. ಸೇವಾಧಾಮ ನನಗೆ ತುಂಬಾ ಖುಷಿ ಕೊಟ್ಟಿದೆ. ಇಲ್ಲಿರುವ ಎಲ್ಲಾ ಸಿಬ್ಬಂದಿ ವರ್ಗದವರನ್ನು ಹಾಗೂ ಆರೈಕೆದಾರರನ್ನು, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ನಾನು ತುಂಬಾ ಮಿಸ್ ಮಾಡಿಕೊಳ್ಳುತ್ತೇನೆ.
ಸೇವಾಧಾಮ ಇನ್ನಷ್ಟು ಚೆನ್ನಾಗಿ ಬೆಳೆಯಲಿ ಮತ್ತು ಇನ್ನಷ್ಟು ಜನರಿಗೆ ಸರಿಯಾದ ಸಮಯಕ್ಕೆ ಸೇವಾಧಾಮದ ಬಗ್ಗೆ ಗೊತ್ತಾಗಿ ಅವರು ಸೇವೆ ಪಡೆಯುವಂತಾಗಲಿ ಎಲ್ಲರಿಗೂ ಒಳ್ಳೆಯದಾಗಲಿ.
Once again thank you very much sevadhama and Vinayak Rao sir

**ಇತಿ ತಮ್ಮ ವಿಶ್ವಾಸಿ**
**ಆಖ್ಯಾನ್ ಶೆಟ್ಟಿ, ಉಡುಪಿ**

## ಸಿಬ್ಬಂದಿಗಳಿಗೆ 3 ದಿನಗಳ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರ



ನಮ್ಮ ಸಂಸ್ಥೆಯ ವತಿಯಿಂದ ಸಿಬ್ಬಂದಿಗಳ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಏಪ್ರಿಲ್ 22, 23 ಮತ್ತು 24 ರಂದು 3 ದಿನಗಳ ಸಾಮರ್ಥ್ಯ ಅಭಿವೃದ್ಧಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಾಗಾರವು ಸಿಬ್ಬಂದಿಗಳ ವೈಯಕ್ತಿಕ ಹಾಗೂ ವೃತ್ತಿಪರ ಬೆಳವಣಿಗೆಗೆ ಸಹಕಾರಿಯಾಗುವಂತೆ ರೂಪಿಸಲಾಗಿತ್ತು.

ಈ ಅವಧಿಯಲ್ಲಿ ವಿವಿಧ ಕ್ಷೇತ್ರಗಳ ಪರಿಣಿತರು ಭಾಗವಹಿಸಿ ಹಲವು ಮಹತ್ವದ ವಿಷಯಗಳ ಕುರಿತು ಮಾಹಿತಿಯನ್ನು ನೀಡಿದರು. ಸಂವಹನ ಕೌಶಲ್ಯ, ಸಮಯ ನಿರ್ವಹಣೆ, ತಂಡದಲ್ಲಿ ಕೆಲಸ ಮಾಡುವ ವಿಧಾನ, ನಾಯಕತ್ವ ಗುಣಗಳು ಹಾಗೂ ಸಮಸ್ಯೆ ಪರಿಹಾರ ಕೌಶಲ್ಯಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಈ ಕಾರ್ಯಾಗಾರವು ಯಶಸ್ವಿಯಾಗಿ ನೆರವೇರಿದ್ದು, ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಇನ್ನಷ್ಟು ಆಯೋಜಿಸುವ ಅಗತ್ಯತೆಯನ್ನು ಮನಗಾಣಿಸಿದೆ.

## ಬೆಳ್ತಂಗಡಿ ತಾಲೂಕಿನ ಬಡಕೋಡಿಯ ಶ್ರೀ ಸುಧಾಕರ್ ನೂಯಿ ಹಾಗೂ ಕುಟುಂಬಸ್ಥರು ಸೌತಡ್ಕ ಸೇವಾಧಾಮಕ್ಕೆ ಭೇಟಿ



**ಸೌತಡ್ಕ (ಏ. 07):** ಬೆಳ್ತಂಗಡಿ ತಾಲೂಕಿನ ಬಡಕೋಡಿಯ ಶ್ರೀ ಸುಧಾಕರ್ ನೂಯಿ ಹಾಗೂ ಕುಟುಂಬಸ್ಥರು ಏಪ್ರಿಲ್ 07 ರಂದು ಸೌತಡ್ಕದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ 'ಸೇವಾಧಾಮ'ಕ್ಕೆ ಭೇಟಿ ನೀಡಿ ದಿವ್ಯಾಂಗರ ಆರೋಗ್ಯವನ್ನು ವಿಚಾರಿಸಿ, ವಿಶ್ವಾಸಭರಿತ ಮಾತುಗಳ ಮೂಲಕ ಅವರಿಗೆ ಧೈರ್ಯ ತುಂಬಿ ಶುಭಹಾರೈಸಿದರು.

## ಬೈಂದೂರು ಸೇವಾಧಾಮಕ್ಕೆ ಭಟ್ಕಳದ ಶ್ರೀ ಮಂಗಳ ತಿಮ್ಮಪ್ಪ ಗೊಂಡ ಭೇಟಿ





**ಬೈಂದೂರು (ಏ. 07):** ಬೆನ್ನುಹುರಿ ಅಪಘಾತಕ್ಕೊಳಗಾದ ಭಟ್ಕಳ ತಾಲೂಕಿನ ಶ್ರೀ ಮಂಗಳ ತಿಮ್ಮಪ್ಪ ಗೊಂಡ ಹಾಗೂ ಅವರ ಆತ್ಮೀಯರಾದ ಶ್ರೀ ವಿನೋದ ಮೊಗೇರ ರವರು ಏಪ್ರಿಲ್ 07 ರಂದು ಬೈಂದೂರು ಒತ್ತಡಗಾಯ ನಿರ್ವಹಣಾ ಮತ್ತು ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಕೇಂದ್ರದ ಸನಿವಾಸಿಗಳ ಆರೋಗ್ಯವನ್ನು ವಿಚಾರಿಸಿ ಧೈರ್ಯ ತುಂಬಿದರು. . ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸೇವಾನಿಕೇತನದಲ್ಲಿ ವಾರದ ಭಜನೆ



ಶ್ರೀ ಲಕ್ಷ್ಮೀ ಭಜನಾ ಮಂಡಳಿ, ಶಿವಾಜಿನಗರ - ಉಜಿರೆ



ಶ್ರೀ ಮಾರಿಕಾಂಬ ಭಜನಾ ಮಂಡಳಿ, ಉಜಿರೆ



ಲಕ್ಷ್ಮೀ ಭಜನಾ ಮಂಡಳಿ, ಅಜಿತ್ ನಗರ - ಉಜಿರೆ



ಶ್ರೀ ಮಹಾಗಣಪತಿ ಭಜನಾ ಮಂಡಳಿ, ನಿಡ್ಲೆ

# ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆ




**ಸೌತಡ್ಕ (ಏ.26) :** ಮಂಗಳೂರು ಬ್ರಾಂಚ್ ಶಿರಡಿ ಸಾಯಿ ಬಿಕ್ಷಾ ಕೇಂದ್ರದ ದಿಶಾಧಿಪತಿ ಶ್ರೀ ಲೋಕೇಶ್ ಕಡಂಬಡಿತ್ತಾಯ, ಕ್ಷೇತ್ರ ಪಾಲಿಕರಾದ ಶ್ರೀಮತಿ ಶಾಂತಕುಮಾರಿ, ಭಜನಾ ಪ್ರಮುಖರಾದ ಶ್ರೀಮತಿ ಹೇಮಲತಾ ಲೋಕೇಶ್, ಸ್ವಯಂಸೇವಕರಾದ ಶ್ರೀಮತಿ ಶುಭವತಿ ಹಾಗೂ ಶ್ರೀ ಪ್ರಶಾಂತ್ ಲೋಕೇಶ್ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಏಪ್ರಿಲ್ 26 ರಂದು ಭೇಟಿ ನೀಡಿ ಒಂದು ಹೊತ್ತಿನ ಊಟಕ್ಕಾಗಿ ರೂ. 4,002/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಭಾರತಿಯ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸ್ವಯಂಸೇವಕರಾದ ಶ್ರೀ ಯತೀಶ್ ಸುವರ್ಣ ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

# "ಪುನಶ್ಚೇತನದ ಹಾದಿಯಲ್ಲಿ ಚೈತನ್ಯ ತುಂಬುವ ಸೇವಾಧಾಮ!"



## ಮಹನೀಯ ದಾನಿಗಳು

- ಶ್ರೀ ಶ್ರೀಧರ ಕುಲಾಲ್, ಬೆಳ್ತಂಗಡಿ
- ಶ್ರೀಮತಿ ಚೈತ್ರ ಕುಮಾರಿ, ಬೆಂಗಳೂರು
- ಶ್ರೀ ಮೋಹನ್ ಎಸ್, ನಿಡ್ಲೆ
- ಶ್ರೀ ಗಿರೀಶ್ ಎಸ್, ಬೇಲೂರು
- ಡಾ ಪಿ ಎನ್ ಉದಯ ಚಂದ್ರ, ಉಜಿರೆ
- ಶ್ರೀ ರಕ್ಷಿತ್ ಎಸ್ ಕುಲಾಲ್, ಅಳದಂಗಡಿ
- ಶ್ರೀ ಕುಸುಮಾಧರ್ ಮತ್ತು ಶ್ರೀಮತಿ ಪೂರ್ಣಿಮಾ, ಬೆಳ್ತಂಗಡಿ
- ಶ್ರೀ ಅಶೋಕ್ ಶೆಟ್ಟಿ, ಹುಣಸೂರ್
- ಶ್ರೀ ಕೆ ಜಯರಾಜ್ ಸಾಲಿಯಾನ್, ಕಡಿರುದ್ಯಾವರ
- ಶ್ರೀಮತಿ ವಂದನಾ ರಾವ್, ಜೋಡುಸ್ಥಾನ
- ಶ್ರೀ ಯು ಬಿ ಮನೋಹರ್ ರಾವ್, ಕನ್ಯಾಡಿ
- ಶ್ರೀಮತಿ ರಚಿತಾ ರಾವ್, ಬೆಂಗಳೂರು
- ಕು ಅದಿತಿ ಪ್ರಧಾನ್, ಮುಂಬೈ
- ಶ್ರೀಮತಿ ಪ್ರಖ್ಯಾತಿ ವೈ ಆರ್, ಬಡಗಕಜೆಕಾರ್
- ಕು ಸಮೀಕ್ಷಾ, ಜೋಡುಸ್ಥಾನ
- ಶ್ರೀ ಚಂದ್ರಶೇಖರ್ ಬಿ, ಉಜಿರೆ
- ಶ್ರೀ ಕೃಷ್ಣಪ್ಪ, ನಾರಾವಿ ಮತ್ತು ತಂಡ
- ಶ್ರೀ ಗಜೇಂದ್ರ ಎಸ್ ಬೇಲೆಮನೆ, ಬೈಂದೂರು
- ಶ್ರೀ ರಘು ಪೂಜಾರಿ, ಮಡಂತ್ಯಾರು
- ಶ್ರೀಮತಿ ಅನುರಾಧ ಶೆಟ್ಟಿ, ಗಂಟಿಹೊಳೆ
- ಶ್ರೀಮತಿ ವಿಮಲಾ ಜಿ ಶೇರಿಗಾರ್, ಮುಂಬೈ
- ಶ್ರೀ ಶ್ರೇಯಸ್ ಎಸ್ ಪೈ, ಉಜಿರೆ
- ಕು ಅದಿತಿ ಶೆಟ್ಟಿ, ಉಜಿರೆ
- ಶ್ರೀಮತಿ ದೀಪಿಕಾ, ಅಡ್ಯಾರ್

## ಸೇವಾನಿಧಿ ದಾನಿಗಳು

- ಶ್ರೀ ಪುರುಷೋತ್ತಮ ಡಿ ಎ, ಧರ್ಮಸ್ಥಳ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀಮತಿ ಜಯಂತಿ ಪುರಂದರ, ನಾರ್ಯ
- ಶ್ರೀ ಯು ರಮೇಶ್ ಪ್ರಭು, ಉಜಿರೆ
- ಶ್ರೀ ಜಿ ರಾಘವೇಂದ್ರ ತೇಜಾ, ತೆಲಂಗಾಣ
- ಶ್ರೀಮತಿ ದಿವ್ಯ ಪುರಂದರ, ಬೆಂಗಳೂರು
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
- ಶ್ರೀ ಜಯಾನಂದ ಎಮ್, ಕನ್ಯಾಡಿ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ನಿತಿನ್, ಉಜಿರೆ
- ಬೇಬಿ ವಿಹಾನ ಎಮ್ ಎಮ್, ನಿಡ್ಲೆ
- ಶ್ರೀ ರಕ್ಷಿತ್ ಎಸ್ ಕುಲಾಲ್, ಅಳದಂಗಡಿ
- ಶ್ರೀ ಬಿ ಪುರಂದರ, ನಾರ್ಯ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ನೀಲಕಂಠ, ನಾರ್ಯ
- ಶ್ರೀ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಶ್ರೀ ಕೆ ರಮೇಶ್ ಪೂಜಾರಿ, ಕಲ್ಮಂಜ
- ಶ್ರೀ ಮಧುಸೂಧನ್, ಉಜಿರೆ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀ ಕಾರ್ತಿಕ್ ಕೆ, ಕನ್ಯಾಡಿ
- ಶ್ರೀ ಗಣೇಶ್ ಶೆಟ್ಟಿ, ಮದ್ದಡ್ಕ
- ಶ್ರೀ ಸಂತೋಷ್ ಕೆ, ಕೊಕ್ಕಡ
- ಶ್ರೀ ಲೋಕೇಶ್ ಪಿ, ಕನ್ಯಾಡಿ

## ಸಂಘ ಸಂಸ್ಥೆಗಳು

- ಜಿ ಆರ್ ಕನ್ಸಲ್ಟಿಂಗ್, ಬೆಂಗಳೂರು
- ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಮುಂಡಾಜೆ
- ಶಿರಡಿ ಸಾಯಿ ಭಿಕ್ಷಾ ಕೇಂದ್ರ, ಮಂಗಳೂರು
- Shereno Limited, Bangalore
- Corporate Leisure and Property Developments Private limited, Bangalore

## ವಸ್ತು ರೂಪದಲ್ಲಿ ದೇಣಿಗೆ

- ಶ್ರೀಮತಿ ಮೀನಾಕ್ಷಿ ಜಿ ಭಟ್, ಜೋಡುಸ್ಥಾನ
- ಶ್ರೀ ಬಿ ರಾಘವ, ಬೈಂದೂರು
- ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಡ

## ಸೇವಾಧಾಮದ ಏಪ್ರಿಲ್ ತಿಂಗಳ ಸೇವಾಕಾರ್ಯಗಳು

- **ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್** - 55
- **ಗಾಲಿಕುರ್ಚಿ ವಿತರಣೆ** - 1
- **ಹೊಸ ಗುರುತಿಸುವಿಕೆ** - 8
- **ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು** - 11

# ಕನ್ಯಾಡಿ ಸೇವಾಭಾರತಿ ನೂತನ ಕಟ್ಟಡ ನಿರ್ಮಾಣಕ್ಕೆ ದೇಣಿಗೆ ನೀಡಿದ ನವ ಜೋಡಿಗಳು



**ಉರುವಾಲು (ಏ. 20):** ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮದ ಹೇರಾ ನಿವಾಸಿ ಹಾಗೂ ಕನ್ಯಾಡಿ ಸೇವಾಭಾರತಿಯ ಸಿಬ್ಬಂದಿಯಾದ ಶ್ರೀ ಕುಸುಮಾಧರ ಹಾಗೂ ಅವರ ಪತ್ನಿ ಶ್ರೀಮತಿ ಪೂರ್ಣಿಮಾ ರವರ ಶುಭವಿವಾಹದ ಸಂದರ್ಭದಲ್ಲಿ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 15,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಭಾರತಿಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಖಜಾಂಚಿ ಶ್ರೀ ಎ ಜೈ ರಾಜ್ ಸಾಲ್ಯಾನ್ ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ನವ ವಧುವರರಿಗೆ ಶುಭಹಾರೈಸಿ, ಧನ್ಯವಾದವಿತ್ತರು.

# ಅಸಂಘಟಿತ ಕಾರ್ಮಿಕರ ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದವರ ಕಲ್ಯಾಣಕ್ಕಾಗಿ ಕನ್ಯಾಡಿ ಸೇವಾಭಾರತಿ ಮನವಿ



ಕನ್ಯಾಡಿ ಸೇವಾಭಾರತಿ ಸಂಸ್ಥೆಯು ಕರ್ನಾಟಕ ಸರ್ಕಾರದ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಮಿಕ ಆಯುಕ್ತರಾದ ಶ್ರೀ ಎಸ್.ಬಿ. ರವಿಕುಮಾರ್ ರವರನ್ನು ಏಪ್ರಿಲ್ 10 ಭೇಟಿ ಮಾಡಿ ಅಸಂಘಟಿತ ಕಾರ್ಮಿಕರ ಸಮಸ್ಯೆಗಳ ಕುರಿತು ಚರ್ಚಿಸಲಾಯಿತು.

ಮುಖ್ಯವಾಗಿ ಕೃಷಿ ಕಾರ್ಮಿಕರು ಕೆಲಸದ ವೇಳೆ ಎತ್ತರದಿಂದ ಬಿದ್ದು ಬೆನ್ನುಮೂಳೆ ಮುರಿತಕ್ಕೊಳಗಾಗಿ (Spinal Cord Injury), ಹಾಸಿಗೆ ಹಿಡಿದಿರುವ ಸ್ಥಿತಿಯಲ್ಲಿರುವವರ ಜೀವನಕ್ಕೆ ಆಸರೆಯಾಗುವಂತಹ ವಿಶೇಷ ಯೋಜನೆಗಳನ್ನು ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯ ಅಡಿಯಲ್ಲಿ ಜಾರಿಗೆ ತರುವಂತೆ ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

ಈಗಾಗಲೇ ಬೆನ್ನುಮೂಳೆ ಅಪಘಾತಕ್ಕೊಳಗಾದವರಿಗಾಗಿ ಸೇವಾಭಾರತಿ ಸಂಸ್ಥೆಯು ಹಮ್ಮಿಕೊಂಡಿರುವ ವಿವಿಧ ಸೇವಾ ಚಟುವಟಿಕೆಗಳ ಕುರಿತು ಆಯುಕ್ತರಿಗೆ ವಿವರಿಸಲಾಯಿತು. ಅಲ್ಲದೆ, ಬೆನ್ನುಹುರಿ ಅಪಘಾತಕ್ಕೊಳಗಾದವರ ಜೀವನದ ಸ್ಥಿತಿಗತಿಗಳ ಕುರಿತಾದ 'ಸಮಗ್ರ ಜೀವನ ಅಧ್ಯಯನ ವರದಿ'ಯನ್ನು ಈ ಸಂದರ್ಭದಲ್ಲಿ ಸಲ್ಲಿಸಲಾಯಿತು. ಈ ನಿಯೋಗದಲ್ಲಿ ಸೇವಾಭಾರತಿಯ ಖಜಾಂಚಿ ಶ್ರೀ ಎ. ಜೈ ರಾಜ್ ಸಾಲಿಯಾನ್ ಕಾನರ್ಪ ರವರು ಅಧಿಕಾರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಉಪಕಾರ್ಮಿಕ ಆಯುಕ್ತರಾದ ಎ.ಸಿ. ತಮ್ಮಣ್ಣ ರವರು ಉಪಸ್ಥಿತರಿದ್ದರು. ಸಂಸ್ಥೆಯ ಈ ಮನವಿಗೆ ಪೂರಕವಾಗಿ ಸ್ಪಂದಿಸಿದ ಕಾರ್ಮಿಕ ಆಯುಕ್ತರು, ಅಸಂಘಟಿತ ವಲಯದ ಕೃಷಿ ಕಾರ್ಮಿಕರ ಹಿತರಕ್ಷಣೆಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿದರು.

# ಬೈಂದೂರು ಮತ್ತು ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಏಪ್ರಿಲ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು











ಶ್ರೀ ರಾಜೇಶ್, ಬೆಳ್ತಂಗಡಿ

ಶ್ರೀ ಬಾಲಚಂದ್ರ, ಬೆಳ್ತಂಗಡಿ






ಶ್ರೀ ಸುಬ್ರಹ್ಮಣ್ಯ ಗಣೇಶ ಹೆಗ್ಡೆ, ಹೊನ್ನಾವರ

## ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**ಮೊದಲ ಮಹಡಿಯ ಗೋಡೆಗಳ ಕೆಲಸ ನಡೆಯುತ್ತಿದೆ. ಜೊತೆಗೆ ಎರಡನೇ ಮಹಡಿಯ ಕಾಮಗಾರಿಯೂ ಪ್ರಾರಂಭಗೊಂಡಿದ್ದು, ಪಿಲ್ಲರ್, ರ್‍ಯಾಂಪ್ ಕಾಂಕ್ರೀಟ್ ಮುಗಿದಿದ್ದು ಸ್ಲಾಬ್ ಕೆಲಸಗಳು ಆರಂಭಗೊಂಡಿವೆ. ಇದುವರೆಗೆ ಒಟ್ಟು ರೂ. 2,07,01,840/- ವೆಚ್ಚವಾಗಿದ್ದು, ಇನ್ನೂ ಮೂರು ಮಹಡಿಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಮುಂದಿನ ಹಂತದ ಕಾಮಗಾರಿಯನ್ನು ಮುಂದುವರಿಸಲು ನಿಧಿಯ ಅವಶ್ಯಕತೆ ಇದ್ದು, ದಾನಿಗಳ ಸಹಕಾರವನ್ನು ನಾವು ನಿರೀಕ್ಷಿಸುತ್ತಿದ್ದೇವೆ."**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ವೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿ ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. LIC ಯ ರೂ. 40 ಲಕ್ಷ ಮಂಜೂರುಗೊಂಡಿರುವ ಕಾರಣ ಅತೀ ಶೀಘ್ರದಲ್ಲಿ ಈ ಮಹಡಿ ನಿರ್ಮಾಣಗೊಳ್ಳಲಿದೆ. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD

237887292400920@cnrb

**Scan and Pay also**

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**


**ಕು। ಅಧಿತಿ ಶೆಟ್ಟಿ** ಉಜಿರೆ


**ಬೇಬಿ। ಯು ಜೆ ಭಾವನ,** ಕಾನರ್ಪ


**ಶ್ರೀಮತಿ ಚೈತ್ರ ಕುಮಾರಿ,** ರಾಜಾಜಿನಗರ


**ಡಾ। ರಾಮಕೃಷ್ಣ ಭಟ್ ಜಿ ಎನ್ ,** ಕನ್ಯಾಡಿ


**ಡಾ। ಈಶ್ವರ ಕೀರ್ತಿ ಸಿ,** ಮಂಗಳೂರು


**ಶ್ರೀ ಗಿರೀಶ್ ಕೆ ಎನ್ , ಮತ್ತು ಶ್ರೀಮತಿ ಶ್ವೇತಾ ಕೆ,** ಉಡುಪಿ


**ಶ್ರೀ ಗಿರೀಶ್ ಎಸ್ ,** ಬೇಲೂರು


**ಶ್ರೀ ಕೃಷ್ಣಮೂರ್ತಿ ರಾವ್,** ಕನ್ಯಾಡಿ


**ಶ್ರೀ ಮೋಹನ್ ಎಸ್ ,** ಮಾಪಲಾಜೆ , ನಿಡ್ಲೆ


**ಶ್ರೀ ಮನೋಜ್ ಶೆಟ್ಟಿ,** ಶಿರಸಿ


**ಶ್ರೀಮತಿ ನವ್ಯಾ,** ಕೊಕ್ಕಡ



**ಶ್ರೀಮತಿ ನೀತಾ ರಾವ್,** ಕಟೀಲು


**ಶ್ರೀಮತಿ ನಿಶ್ಚಿತ ರಾವ್,** ಬೆಂಗಳೂರು


**ಶ್ರೀ ಪುರುಷೋತ್ತಮ್ ಸೋಮ ಮರಾಠಿ,** ಕುಮಟಾ


**ಶ್ರೀ ರಾಜೇಂದ್ರ ಅಜ್ರಿ,** ಕನ್ಯಾಡಿ


**ಶ್ರೀ ರಕ್ಷಿತ್ ಎಸ್ ಕುಲಾಲ್,** ಅಳದಂಗಡಿ


**ಕು। ಸಮೀಕ್ಷಾ,** ಧರ್ಮಸ್ಥಳ


**ಶ್ರೀ ಸುಧಾಕರ ಗೌಡ ಪೂರ್ಜೆ,** ಧರ್ಮಸ್ಥಳ


**ಶ್ರೀ ಸುಮಂತ್ ಕುಮಾರ್ ಜೈನ್,** ಗುರುವಾಯನಕೆರೆ


**ಶ್ರೀ ಕೆ ಸೂರ್ಯನಾರಾಯಣ ರಾವ್,** ದೊಂಡೋಲೆ

## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



**ಕು| ಅಧಿತಿ ಕೇತನ್ ಪ್ರಧಾನ್,**
ಮುಂಬೈ



**ಶ್ರೀ ಅಶೋಕ್ ಶೆಟ್ಟಿ,**
ಒಡಿಲ್ನಾಳ



**ಶ್ರೀಮತಿ ಜೋಸ್ಪಿನಾ ಪಿ. ಟಿ,** ಯು.ಕೆ



**ಕು. ವಿಂಧ್ಯಾ ಗುರುರಾಜ್,**
ಗಂಟಿಹೊಳೆ



**ಶ್ರೀಮತಿ ಪಂಚಮಿ ಪೈ,**
ಉಜಿರೆ




**ಶ್ರೀ ಯತೀಶ್ ಸುವರ್ಣ,**
ಕನ್ಯಾಡಿ



**ಶ್ರೀ ನಿಖಿಲ್ ಗೋವರ್ಧನ್,**
ಮುಂಬೈ



**ಶ್ರೀಮತಿ ಪ್ರಖ್ಯಾತಿ ವೈ. ಆರ್.**
ಮಂಗಳೂರು




**ಶ್ರೀ ಗಜೇಂದ್ರ ಎಸ್ , ಶ್ರೀಮತಿ ರಾಜಲಕ್ಷ್ಮಿ,**
ಬೇಲೆಮನೆ



**ಡಾ| ಅರ್ಚನಾ ಚೇತನ್,**
ಬೆಂಗಳೂರು



**ಶ್ರೀ ಕುಸುಮಾಧರ ಮತ್ತು ಶ್ರೀಮತಿ ಪೂರ್ಣಿಮಾ,**
ಹೇರಾ



**ಶ್ರೀ ಸಾಗರ್,**
ಮೈಸೂರು

## ಸೇವಾಧಾಮದಲ್ಲಿ ಹುಟ್ಟುಹಬ್ಬ ಆಚರಣೆ



**ಸೌತಡ್ಕ (ಏ.25):** ಸೇವಾಭಾರತಿ ಸಂಸ್ಥೆಯ ಖಜಾಂಚಿ ಶ್ರೀ ಎ ಜೈ ರಾಜ್ ಸಾಲ್ಯಾನ್ ಕಾನರ್ಪ ಹಾಗೂ ಅವರ ಕುಟುಂಬಸ್ಥರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಏಪ್ರಿಲ್ 25 ರಂದು ಭೇಟಿ ನೀಡಿ ಅವರ ಪುತ್ರಿ ಯು ಜೆ ಭಾವನ ರವರ ಹುಟ್ಟುಹಬ್ಬವನ್ನು ಕೇಂದ್ರದಲ್ಲಿ ಸನಿವಾಸಿಗಳಿಗೆ ಮತ್ತು ಆರೈಕೆದಾರರಿಗೆ ಒಂದು ಹೊತ್ತಿನ ಊಟವನ್ನು ನೀಡುವುದರೊಂದಿಗೆ ಸಮಾಜಕ್ಕೆ ಮಾದರಿಯಾಗುವಂತೆ ಹುಟ್ಟುಹಬ್ಬ ಆಚರಿಸಿಕೊಂಡರು. ಬೇಬಿ. ಯು ಜೆ ಭಾವನ ಜೈರಾಜ್ ಕಾನರ್ಪ ಇವರಿಗೆ ಸಂಸ್ಥೆಯ ಪರವಾಗಿ ಶುಭಹಾರೈಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ, ಅವರ ಮಗಳಾದ ಕು. ರಕ್ಷಿತಾ, ಹಾಗೂ ಅವರ ಆತ್ಮೀಯರಾದ ಶ್ರೀಮತಿ ದಿ ಎಲೀಸ್ ಹಾಗೂ ಸೇವಾಧಾಮದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ನಿಮಗಿದು ತಿಳಿದಿರಲಿ

### ಅದೃಶ್ಯ ನೋವು (Neuropathic Pain)

ಸ್ಪರ್ಶ ಜ್ಞಾನವಿಲ್ಲದ ಭಾಗದಲ್ಲೂ ತೀವ್ರವಾದ ನೋವು ಕಾಣಿಸಿಕೊಳ್ಳಬಹುದು. ಇದನ್ನು "ನರರೋಗ ನೋವು" ಎನ್ನಲಾಗುತ್ತದೆ. ರೋಗಿಗೆ ಆ ಭಾಗದಲ್ಲಿ ಏನನ್ನೂ ಅನುಭವಿಸಲು ಸಾಧ್ಯವಾಗದಿದ್ದರೂ, ಅಲ್ಲಿ ಸುಟ್ಟಂತೆ ಅಥವಾ ವಿದ್ಯುತ್ ಶಾಕ್ ಹೊಡೆದಂತೆ ಭಾಸವಾಗುತ್ತಿರುತ್ತದೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6,000/ -ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10,000/ -ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

237887292400920@cnrb

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಅಸಾಧ್ಯವನ್ನು ಸಾಧ್ಯವಾಗಿಸಿದ ಪುತ್ತೂರಿನ ಪ್ರದೀಪ್ ಅವರ ಯಶೋಗಾಥೆ




ಶ್ರೀ ಪ್ರದೀಪ ಕೆ ರವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕೊಡಿಪ್ಪಾಡಿ ಗ್ರಾಮದ ನಿವಾಸಿ. ಅವರು 26 ನವೆಂಬರ್ 1986 ರಂದು ಶ್ರೀ ದೇವಪ್ಪ ಗೌಡ ಮತ್ತು ಶ್ರೀಮತಿ ಪದ್ಮಾವತಿ ದಂಪತಿಯ ಪುತ್ರರಾಗಿ ಜನಿಸಿದರು. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದರೂ, ಅವರ ಜೀವನ ಮಾತ್ರ ಸಾಮಾನ್ಯವಾಗಿರಲಿಲ್ಲ

ಪ್ರದೀಪ್ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಊರಿನ ಸರ್ಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ನಂತರ ಪುತ್ತೂರು ಜೂನಿಯರ್ ಕಾಲೇಜಿನಲ್ಲಿ ತಮ್ಮ ಮುಂದಿನ ಶಿಕ್ಷಣವನ್ನು ಮುಂದುವರೆಸಿ, ಉಪ್ಪಿನಂಗಡಿ ಕಾಲೇಜಿನಲ್ಲಿ ಬಿ.ಕಾಮ್ ಪದವಿಯನ್ನು ಪಡೆದರು. ಕಲಿಕೆಯ ಮೇಲೆ ಆಸಕ್ತಿ ಇತ್ತು, ಜೀವನದಲ್ಲಿ ಏನಾದರೂ ಸಾಧಿಸಬೇಕು ಎಂಬ ಕನಸು ಕೂಡ ಇತ್ತು.

2010ರಲ್ಲಿ ಸರಸ್ವತಿ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿಯಲ್ಲಿ ಕ್ಲರ್ಕ್ ಆಗಿ ಕೆಲಸಕ್ಕೆ ಸೇರಿಕೊಂಡ ಪ್ರದೀಪ್, ತಮ್ಮ ಪರಿಶ್ರಮದಿಂದ ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗೆ ಏರಿದರು. ಕೆಲಸದ ಜೊತೆಯಲ್ಲೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತ, ಮೈಸೂರು ಓಪನ್ ಯೂನಿವರ್ಸಿಟಿಯಲ್ಲಿ ಎಂ.ಕಾಮ್ ಪದವಿಯನ್ನು ಪೂರ್ಣಗೊಳಿಸಿದರು. ಹೊರಗೆ ನೋಡಲು ಎಲ್ಲವೂ ಸರಿಯಾಗಿ ಸಾಗುತ್ತಿದ್ದಂತೆ ಕಾಣುತ್ತಿದ್ದರೂ, ಒಳಗೊಂದೆಡೆ ಅವರ ಜೀವನದಲ್ಲಿ ಒಂದು ದೊಡ್ಡ ಸವಾಲು ಬೆಳೆಯುತ್ತಿತ್ತು.

ಹುಟ್ಟಿನಿಂದಲೇ ಲಂಬರ್ ಸ್ಪೈನಲ್ ಟ್ಯೂಮರ್ ಎಂಬ ಸಮಸ್ಯೆಯನ್ನು ಹೊತ್ತುಕೊಂಡಿದ್ದ ಪ್ರದೀಪ್, ಅದನ್ನು ಬಾಲ್ಯದಲ್ಲೇ ತಿಳಿದುಕೊಂಡರು. ವರ್ಷಗಳು ಕಳೆಯುತ್ತಾ ಟ್ಯೂಮರ್ ಕೂಡ ನಿಧಾನವಾಗಿ ದೊಡ್ಡದಾಗತೊಡಗಿತು. ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಾ, ವರ್ಷಕ್ಕೆ ಹಲವಾರು ಬಾರಿ ಜ್ವರ ಬರುವುದು, ಕಾಲಿನಲ್ಲಿ ಬಲ ಕಡಿಮೆಯಾಗುವುದು ಇವೆಲ್ಲವೂ ಅವರ ಜೀವನವನ್ನು ಕಷ್ಟಕರವಾಗಿಸಿತು.

ಆದರೆ ಪ್ರದೀಪ್ ಸೋಲಲಿಲ್ಲ. ಮನೆಯಲ್ಲೇ ಚೇತರಿಸಿಕೊಂಡು ನಂತರ, ವಾಕರ್ ಹಿಡಿದು ಮತ್ತೆ ನಡೆಯಲು ಕಲಿತರು. ಫಿಸಿಯೋಥೆರಪಿ ಮೂಲಕ ತಮ್ಮನ್ನು ತಾವು ಪುನಃ ಕಟ್ಟಿಕೊಳ್ಳಲು ಪ್ರಯತ್ನಿಸಿದರು. ಜೀವನ ಅವರನ್ನು ಎಷ್ಟೇ ಪರೀಕ್ಷಿಸಿದರೂ, ಅವರು ಹಿಂತಿರುಗಲಿಲ್ಲ.

2023ರ ಫೆಬ್ರವರಿ 28ರಂದು, ಶ್ರೀ ಕೆ. ವಿನಾಯಕ ರಾವ್ ಅವರ ಪರಿಚಯದ ಮೂಲಕ ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಸೇರಿದ ಪ್ರದೀಪ್, ಮೂರು ತಿಂಗಳ ಪುನಶ್ಚೇತನದಿಂದ ಹೊಸ ಶಕ್ತಿ ಪಡೆದರು. ಆ ಅನುಭವ ಅವರಿಗೆ ಹೊಸ ಆಶೆಯನ್ನು ನೀಡಿತು.

ಪುನಶ್ಚೇತನದ ನಂತರ, ಮನೆಯಲ್ಲಿಯೇ ಅಡಿಕೆ ಸಿಪ್ಪೆ ತೆಗೆಯುವ ಕೆಲಸ ಆರಂಭಿಸಿದರು. ಚಿಕ್ಕ ಕೆಲಸವಾದರೂ, ಅದು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿತು. 2026ರ ಏಪ್ರಿಲ್ 9ರಂದು ತಮ್ಮದೇ ಸ್ವಂತ ಅಂಗಡಿಯನ್ನು ಆರಂಭಿಸಿ ತರಕಾರಿ, ಫ್ಯಾನ್ಸಿ ಹಾಗೂ ತಿಂಡಿಗಳ ಮಾರಾಟದ ಮೂಲಕ ತಮ್ಮ ಜೀವನವನ್ನು ಹೊಸ ದಿಕ್ಕಿನಲ್ಲಿ ಸಾಗಿಸಲು ಆರಂಭಿಸಿದರು.

ಪ್ರದೀಪ್ ಅವರ ಕಥೆ ಕೇವಲ ಹೋರಾಟದ ಕಥೆಯಲ್ಲ—ಅದು ಧೈರ್ಯದ, ಸಹನೆಯ ಮತ್ತು ಆತ್ಮವಿಶ್ವಾಸದ ಕಥೆ. ತಮ್ಮ ಜೀವನದ ಕಷ್ಟಗಳನ್ನು ಮೀರಿ ನಿಂತು, ಇತರರಿಗೆ ಸ್ಪೂರ್ತಿಯ ಬೆಳಕಾಗಿರುವ ವ್ಯಕ್ತಿಯ ಕಥೆ.

**ಶುಭಹಾರೈಸಲು ಸಂಪರ್ಕಿಸಿ :9449180038**